ದಿನಾಂಕಃ 25.07.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಮುಂದುವರೆದ ಪಾಟೀಸವಾಲುಃ ಪ್ರತಿವಾದಿಗಳ ಪರ ವಕೀಲರಿಂದಃ

12. ಸಿ ಮಿಸ್ ನಂ.12/2000 ರಲ್ಲಿ ಗುರುಲಿಂಗಪ್ಪನವರ ಮಗ ನಾಗಪ್ಪರವರ ಸಾಕ್ಷ್ಯವಾಗಿತ್ತು ಎಂದರೆ ಸರಿ, ಸಾಕ್ಷಿಗೆ ಒಂದು ಸಾಕ್ಷ್ಯದ ದೃಢಿಕೃತ ನಕಲನ್ನು ತೋರಿಸಿದ್ದು, ಅದು ನಾಗಪ್ಪರವರ ಸಾಕ್ಷ್ಯವೆಂದು ನೋಡಿ ಗುರುತಿಸಿದ್ದಾರೆ, ಅದನ್ನು ನಿಡಿ6 ಎಂದು ಗುರುತಿಸಲಾಯಿತು. ಅದರಲ್ಲಿ ನಾಗಪ್ಪರವರು ನನ್ನ ತಾಯಿ ಗುರುಲಿಂಗಪ್ಪರವರ ಹೆಂಡತಿ ಅಲ್ಲ, ನಾನು ಅವರ ಮಗನಲ್ಲ ಎಂದು ಸಾಕ್ಷಿ ಹೇಳಿದ್ದಾರೆ, ಅದನ್ನು ಸುಳ್ಳಾಗಿ ಹೇಳಿದ್ದಾರೆ. ದಾವೆಯ ಸ್ವತ್ತುಗಳ ಚೆಕ್‌ಬಂದಿಗಳನ್ನು ನಾನು ನನ್ನ ದಾವೆಯಲ್ಲಿ ನೀಡಿಲ್ಲ ಎಂದರೆ ಸರಿ. ಅವುಗಳನ್ನು ಹೇಳಲು ನನಗೆ ನೆನಪಿರುವುದಿಲ್ಲ. ಸಾಕ್ಷ್ಯ ಮುಂದುವರೆದು ಒಂದು ಕಡೆ ಶಾಲೆ ಇದೆ ಎನ್ನುತ್ತಾರೆ. ದಾವಾ ಆಸ್ತಿಗಳಲ್ಲಿ ನಾನು ಮತ್ತು ನನ್ನ ತಾಯಿ ಪ್ರತಿವಾದಿಗಳ ಜೊತೆಗೆ ಜಂಟಿ ಕಬ್ಜೆಯಲ್ಲಿ ಇದ್ದೇವೆ ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿಲ್ಲ, ಜೊತೆಯಲ್ಲಿಯೇ ಇದ್ದೇವೆ. ಗುರುಲಿಂಗಪ್ಪರವರು ಮೃತಪಟ್ಟ ದಿನದಿಂದ ದಾವಾ ಸ್ವತ್ತುಗಳಿಗೆ ಸಂಭಂದಿಸಿದ ಹಾಗೆ ನಾನಾಗಲೀ ನನ್ನ ತಾಯಿಯಾಗಲೀ ಕಂದಾಯ ಹಾಗೂ ತೆರಿಗೆ ಪಾವತಿ ಮಾಡಿರುವ ಬಗ್ಗೆ ದಾಖಲೆಗಳು ಇಲ್ಲ.

13. ಗುರುಲಿಂಗಪ್ಪರವರ ತಾಯಿ ಓ.ಎಸ್ ನಂ.365/1990 ರಲ್ಲಿ ನಾನು ಗುರುಲಿಂಗಪ್ಪರವರ ಮಗನಲ್ಲ, ನನ್ನ ತಾಯಿ ಅವರ ಹೆಂಡತಿ ಅಲ್ಲ ಎಂದು ಪ್ರತಿವಾದ ಪತ್ರ ಹಾಕಿರಬಹುದು ಅದು ಸುಳ್ಳಾಗಿರುತ್ತದೆ. ಸದರಿ ದಾವೆಯ ಡಿಕ್ರಿಯ ಪ್ರಕಾರ ನನ್ನ ತಾಯಿಯ ಹೆಸರಿಗೆ ಮಾಡಿಸಿಕೊಂಡಿದ್ದಂತಹ ಖಾತೆಗಳು ವಜಾ ಆಗಿ, ಗುರುಲಿಂಗಪ್ಪಟವರ ಹೆಸರಿಗೆ ಖಾತೆಗಳು ಆಗಿವೆ ಎಂದರೆ ಸರಿ. ಅವರು ಮೃತಪಟ್ಟ ನಂತರ ಪ್ರತಿವಾದಿಗಳು ಹಾಗೂ ನಾಗಪ್ಪರವರ ಹೆಸರಿಗೆ ಖಾತೆಗಳು ಆಗಿವೆ ಎಂದರೆ ಸರಿ. ಓ. ಎಸ್ ನಂ.365/1990 ಹಾಗೂ ಸಿ.ಮಿಸ್ ನಂ.12/2000 ರಲ್ಲಿ ಗುರುಲಿಂಗಪ್ಪರವರು ನನ್ನ ತಾಯಿ ಅವರ ಹೆಂಡತಿ ಅಲ್ಲ, ನಾನು ಅವರ ಮಗನಲ್ಲ

ಎಂದು ಹೇಳಿರಬಹುದು, ಅದು ಸುಳ್ಳಾಗಿರುತ್ತದೆ. ಇವು ತಿರ್ಮಾನವಾದ ಮೇಲೆ ನಾನಾಗಲೀ ನನ್ನ ತಾಯಿಯಾಗಲೀ ಗುರುಲಿಂಗಪ್ಪರವರ ಹೆಂಡತಿ ಮತ್ತು ಮಗನೆಂದು ಘೋಷನೆ ಮಾಡಿ ಎಂದು ಘೋಷನಾತ್ಮಕ ದಾವೆಯನ್ನು ಸಲ್ಲಿಸಿರುವುದಿಲ್ಲ.

14. ನಾನು ಹಾಜರು ಪಡಿಸಿರುವ ನಿಪಿ1 ರಿಂದ 3 ರಲ್ಲಿ ನನ್ನ ತಾಯಿಯ ಹೆಸರುಗಳು ಇದ್ದು, ಅವು ಗುರುಲಿಂಗಪ್ಪರವರ ಹೆಸರಿಗೆ ನ್ಯಾಯಾಲಯದ ಡಿಕ್ರಿಯ ಪ್ರಕಾರ ಬದಲಾವಣೆ ಆದವು ಎಂದರೆ ಸರಿ. ನಿಪಿ4 ರಲ್ಲಿ ಕಾಶವ್ವರವರ ಹೆಸರು ಇದ್ದು, ಅದಕ್ಕೂ ಪೂರ್ವದಲ್ಲಿ ಅದು ಗುರುಲಿಂಗಪ್ಪರವರ ಹೆಸರು ಇತ್ತು ಎಂದರೆ ಸರಿ. ನನಗೆ ಮೈಯಲ್ಲಿ ಹುಷಾರಿಲ್ಲವೆಂದು ಗುರುಲಿಂಗಪ್ಪರವರು ತನ್ನ ತಾಯಿಯ ಹೆಸರಿಗೆ ಖಾತೆ ಮಾಡಬೇಕೆಂದು ವರದಿ ಕೊಟ್ಟಿದ್ದರು ಎಂದರೆ ಸರಿ. ಸಾಕ್ಷಿ ಮುಂದವರೆದು ವರದಿ ಕೊಟ್ಟಿದ್ದು ಗೊತ್ತಿದೆ, ಏನೆಂದು ಕೊಟ್ಟಿದ್ದಾರೆ ಎಂದು ಗೊತ್ತಿಲ್ಲ ಎನ್ನುತ್ತಾರೆ. ದಾವಾ 1 ನೇ ಆಸ್ತಿಗೆ ಸಂಭಂದಿಸಿದಂತೆ ಗುರುಲಿಂಗಪ್ಪರವರು ಕಾಶವ್ವರವರ ಹೆಸರಿಗೆ ಬದಲಾವಣೆ ಮಾಡಲು ಕೊಟ್ಟ ವರದಿಯ ಮೇಲೆ ಡೈರಿ ಆಗಿರುವುದನ್ನು ನಿಪಿ56 ರಂತೆ ಹಾಜರು ಪಡಿಸಿದ್ದೇನೆ ಎಂದರೆ ಸರಿ. ಕಾಶವ್ವವರ ಹೆಸರಿನಲ್ಲಿ ಆ ರೀತಿ ವರದಿಯ ಪ್ರಕಾರ ಖಾತೆಯಾಗಿರುವ ಉತಾರಗಳನ್ನು ನಿಪಿ4 ಮತ್ತು 5 ನ್ನು ನಾನು ಹಾಜರು ಪಡಿಸಿದ್ದೇನೆ ಎಂದರೆ ಸರಿ.

15. ನಿಪಿ6 ರ ಪ್ರಕಾರ ಪ್ರತಿವಾದಿಗಳ ಹೆಸರುಗಳು 1 ನೇ ದಾವಾ ಸ್ವತ್ತಿಗೆ ದಾಖಲಾಗಿದೆ ಎಂದರೆ ಸರಿ. ನಾನು ಹಾಜರು ಪಡಿಸಿರುವ ಉತಾರಗಳ ಪ್ರಕಾರ ಸದರಿ ಆಸ್ತಿ ಎನ್.ಎ (ಅನ್ಯಕ್ರಾಂತ) ಆಗಿದೆ ಎಂದರೆ ಸರಿ. ಅದನ್ನು ನನ್ನ ವಾದಪತ್ರದಲ್ಲಿ ವ್ಯವಸಾಯದ ಭೂಮಿ ಎಂದು ತೋರಿಸಿದ್ದೇನೆ ಎಂದರೆ ಸರಿ. ನಿಪಿ7 ನ್ನು ನನಗೆ ನೀಡಿದ ನಂತರವೂ ನಾನು ತೆರಿಗೆ ಪಾವತಿ ಮಾಡಿಲ್ಲ. ನಿಪಿ12 ರಲ್ಲಿ ಇರುವ ಬಸವರಾಜ ಗುರುಲಿಂಗಪ್ಪ ಪಟ್ಟನಶೆಟ್ಟಿ ಯಾರು ಎಂದು ನನಗೆ ಗೊತ್ತಿಲ್ಲ. ಉತಾರಗಳನ್ನು ನೋಡಿದ ನಂತರ ಅವರು ಯಾರು

ಎಂದು ವಿಚಾರ ಮಾಡಿದ್ದೀರಾ ಎಂದರೆ ಸಾಕ್ಷಿ ಆ ಹೆಸರಿನವರು ನಮ್ಮ ಮನೆಯಲ್ಲಿ ಯಾರು ಇಲ್ಲ ಎನ್ನುತ್ತಾರೆ. ನಿಪಿ8 ರಿಂದ 19ರ ದಾಖಲೆಗಳು ಗುರುಲಿಂಗಪ್ಪರವರು ಮೃತಪಟ್ಟ ನಂತರ ದಾವಾ ಬಿ-ಶೆಡ್ಯೂಲ್ ಸ್ವತ್ತುಗಳಿಗೆ ಪ್ರತಿವಾದಿಗಳ ಹೆಸರುಗಳು ದಾಖಲು ಆಗಿವೆ ಎಂದರೆ ಸರಿ. ನಿಪಿ21 ಶಾಲಾ ದಾಖಲೆಯನ್ನು ದಾವೆ ಸಲ್ಲಿಸುವ 2 ತಿಂಗಳ ಮೊದಲು ತೆಗೆದುಕೊಂಡಿದ್ದೇನೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ಬರೆದಿರುವುದಕ್ಕೆ ನನ್ನ ತಾಯಿ ಮಾಹಿತಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ, ನನ್ನ ತಂದೆ ಕೊಟ್ಟಿದ್ದಾರೆ. ನಿಪಿ23 ಕೋರ್ಟ್ ಡಿಕ್ರಿಯ ಪ್ರಕಾರ ರದ್ದಾಗಿದೆ ಎಂದರೆ ಸರಿ. ಗುರುಲಿಂಗಪ್ಪರವರು ಮೃತಪಟ್ಟ ದಿನದಿಂದ 3 ವರ್ಷಗಳ ಒಳಗೆ ನಾನಾಗಲೀ ನನ್ನ ತಾಯಿಯಾಗಲೀ ದಾವಾ ಸ್ವತ್ತುಗಳಲ್ಲಿ ನಮಗೂ ಹಕ್ಕು ಇದೆ ಎಂದು ದಾವೆ ಸಲ್ಲಿಸಿಲ್ಲ.

ಈ ಹಂತದಲ್ಲಿ ನಿಪಿ26 ಮೋಡಿ ಭಾಷೆಯಲ್ಲಿರುವುದು ಕಂಡು ಬಂದಿದ್ದು, ವಾದಿಪರ ವಕೀಲರು ಅದರ ತರ್ಜಿಮೆ ಪ್ರತಿಯನ್ನು ಹಾಜರು ಪಡಿಸಲು ಸಮಯ ಕೋರಿದ್ದು, ಪಾಟೀಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

(ಕೆ ಎಮ್ ಶಂಕರ್)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ